**ವೆಬಸೈಟಿನಲ್ಲಿ ಪ್ರಕಟಿಸಲು ಕಚೇರಿಯ ಮಾಹಿತಿ. ಮಾರ್ಚ-2017**

**ಸಂಸ್ಥೆಯ ವಿವರ, ಕಾರ್ಯವ್ಯಾಪ್ತಿ ಮತ್ತು ಜವಾಬ್ದಾರಿಗಳು.**

ಕಾರ್ಯಾಲಯದ ಹೆಸರು: ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿ.ಪಂ) ಹಳಿಯಾಳ ರವರ ಕಚೇರಿ.

ಕಾರ್ಯಾಲಯದ ವ್ಯಾಪ್ತಿ: ಹಳಿಯಾಳ ತಾಲೂಕು.

ಕಾರ್ಯಾಲಯದ ಮುಖ್ಯಸ್ಥರು: ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿ.ಪಂ) ಹಳಿಯಾಳ

## ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಲ್ಲಾ ಪಂಚಾಯತ್) ಹಳಿಯಾಳ, ಉತ್ತರಕನ್ನಡ ಇವರ ಕಚೇರಿಯ ಅಧಿಕಾರಿ, ಸಿಬ್ಬಂದಿಗಳ ಕಾರ್ಯವ್ಯಾಪ್ತಿ ಹಾಗೂ ಜವಾಬ್ದಾರಿ

**ತೋಟಗಾರರು:**

ಕಚೇರಿಯ ಆವರಣದ ಉದ್ಯಾನವನವನ್ನು ಹಾಗೂ ಸಸ್ಯಾಗಾರ ಅಭಿವೃದ್ಧಿಪಡಿಸುವುದು, ಕಡತ ಮತ್ತು ಟಪಾಲುಗಳನ್ನು ಶಾಖೆಗಳಿಗೆ ತೆಗೆದುಕೊಂಡು ಹೋಗುವುದು, ಪತ್ರಗಳ ವಿತರಣೆ, ಅಂಚೆ ಕಚೇರಿಗೆ ಹೋಗಿಬರುವುದು, ಸರ್ಕಾರಿ ಸುತ್ತೋಲೆಗಳನ್ನು ಸಿಬ್ಬಂದಿಗಳಿಗೆ ವಿತರಿಸುವುದು, ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸುವುದು, ಮೇಲಧಿಕಾರಿಗಳ ಆದೇಶ ಪಾಲಿಸುವುದು, ಕೆಲಸದ ಅವಧಿಯಲ್ಲಿ ಕಡ್ಡಾಯವಾಗಿ ಸಮವಸ್ತ್ರ ಧರಿಸತಕ್ಕದ್ದು.

**ತೋಟಗಾರಿಕೆ ಸಹಾಯಕರು:**

ಸಹಾಯಕ ತೋಟಗಾರಿಕೆ ಅಧಿಕಾರಿರವರ ಎಲ್ಲ ಕೆಲಸಗಳಲ್ಲಿ ಸಹಕಾರ ನೀಡುವುದು, ಎಲ್ಲ ಯೋಜನೆಗಳ ಪರಿಕರಗಳನ್ನು ಫಲಾನುಭವಿಗಳಿಗೆ ವಿತರಿಸುವ ಕ್ರಮ ಕೈಗೊಳ್ಳುವುದು, ಕಚೇರಿ ನರ್ಸರಿಯ ಡಿ.ಎಮ್.ಆರ್. ನಿರ್ವಹಣೆ ಮಾಡುವುದು, ಮೇಲಧಿಕಾರಿಗಳ ಆದೇಶ ಪಾಲಿಸುವುದು.

**ಸಹಾಯಕ ತೋಟಗಾರಿಕೆ ಅಧಿಕಾರಿ:**

ರಾಜ್ಯವಲಯ, ಜಿಲ್ಲಾ ಪಂಚಾಯತ, ತಾಲೂಕ ಪಂಚಾಯತ ಹಾಗೂ ವಿಶೇಷ ಯೋಜನೆಗಳ ಕಡತಗಳ ನಿರ್ವಹಣೆ ಹಾಗೂ ಎಂಪಿಕ್ ಸಿದ್ಧಪಡಿಸುವುದು, ಎಲ್ಲ ಯೋಜನೆಗಳ ಮಾರ್ಗಸೂಚಿಗಳನ್ವಯ ಯೋಜನೆಗಳ ಅನುಷ್ಠಾನ ಕ್ರಮ ಕೈಗೊಳ್ಳುವುದು, ತಾಂತ್ರಿಕ ಮಂಜೂರಾತಿ ಕುರಿತು ಮೇಲಧಿಕಾರಿಗಳಿಗೆ ಪ್ರಸ್ಥಾವನೆ ಸಲ್ಲಿಸುವುದು, ಫಲಾನುಭವಿಗಳ ಪಟ್ಟಿ ತಯಾರಿಸಿ ಮೇಲಧಿಕಾರಿಗಳಿಗೆ ಸಲ್ಲಿಸುವುದು, ವಿಧಾನಸಭೆ / ಲೋಕಸಭೆ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮಾಹಿತಿ ತಯಾರಿಸಿ ಮಂಡಿಸುವುದು, ತೋಟಗಾರಿಕೆ ಬೆಳೆಗಳ ಮೌಲ್ಯಮಾಪನ ಕೆಲಸಗಳು, ಮಾಸಿಕ ಪ್ರಗತಿ ವರದಿ ತಯಾರಿಸುವುದು, ತೋಟಗಾರಿಕೆ ಬೆಳೆಗಳ ರೈತರ ತಾಕುಗಳ ಪರಿಶೀಲನೆ ಹಾಗೂ ತಾಂತ್ರಿಕ ಮಾಹಿತಿ ನೀಡುವುದು, ಎಲ್ಲ ಬಗೆಯ ಡಿ.ಸಿ. ಬಿಲ್ಲುಗಳನ್ನು ತಯಾರಿಸುವುದು, ಎಮ್.ಜಿ.ನ.ರೇ.ಗಾ ಯೋಜನೆಯಡಿ ಬರುವ ಎನ್.ಎಮ್.ಆರ್ ಜನರೇಟ ಹಾಗೂ ಪೆಮೆಂಟ ಮಾಡುವುದು, ಕಡತಗಳ ನಿರ್ವಹಣೆ ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು.

**ಸಹಾಯಕ ತೋಟಗಾರಿಕೆ ಅಧಿಕಾರಿಗಳು –**
**ರೈತ ಸಂಪರ್ಕ ಕೇಂದ್ರ, ಹಳಿಯಾಳ, ಮುರ್ಕವಾಡ, ಸಾಂಬ್ರಾಣಿ, ದಾಂಡೇಲಿ**

ಆಯಾ ರೈತ ಸಂಪರ್ಕ ಕೇಂದ್ರಗಳು ಕೇಂದ್ರಸ್ಥಾನವಾಗಿರುತ್ತವೆ. ತಮ್ಮ ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲ ಗ್ರಾಮ ಪಂಚಾಯತಗಳಲ್ಲಿ ಎಲ್ಲ ಯೋಜನೆಗಳ ಮಾರ್ಗಸೂಚಿಗಳನ್ವಯ ಯೋಜನೆಗಳ ಅನುಷ್ಠಾನ ಕ್ರಮ ಕೈಗೊಳ್ಳುವುದು, ತಾಂತ್ರಿಕ ಮಂಜೂರಾತಿ ಕುರಿತು ಮೇಲಧಿಕಾರಿಗಳಿಗೆ ಪ್ರಸ್ಥಾವನೆ ಸಲ್ಲಿಸುವುದು, ಗ್ರಾಮಸಭೆಗಳಿಗೆ ಹಾಜರಾಗಿ ಯೋಜನೆಗಳ ಪ್ರಚಾರ ಕೈಗೊಳ್ಳುವುದು, ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡುವುದು. ಎಮ್.ಜಿ.ನ.ರೇ.ಗಾ ಯೋಜನೆಯನ್ನು ತಾಕಿನಲ್ಲಿ ಅನುಷ್ಠಾನ ಮಾಡುವುದು. ತೋಟಗಾರಿಕೆ ಬೆಳೆಗಳ ರೈತರ ತಾಕುಗಳ ಪರಿಶೀಲನೆ ಹಾಗೂ ತಾಂತ್ರಿಕ ಮಾಹಿತಿ ನೀಡುವುದು ಹಾಗೂ ಮೇಲಧಿಕಾರಿಗಳ ಆದೇಶ ಪಾಲಿಸುವುದು.

**ಪ್ರಥಮ ದರ್ಜೆ ಸಹಾಯಕ:**

ವೇತನ ಬಿಲ್ಲು, ಎ.ಸಿ. ಬಿಲ್ಲು, ಎನ್‌ಡಿಸಿ ಬಿಲ್ಲು, ಪ್ರವಾಸ ಭತ್ಯೆ ಬಿಲ್ಲು ತಯಾರಿಸುವುದು, ಸಂಬಂಧಪಟ್ಟ ವಹಿಗಳ ನಿರ್ವಹಣೆ, ನಗದು ವಹಿ ನಿರ್ವಹಣೆ, ಸಾದಿಲ್ವಾರು, ಇತರ ಬಿಲ್ಲುಗಳಿಗೆ ಮಂಜೂರಾತಿ ಕ್ರಮ ಕೈಗೊಳ್ಳುವುದು, ಸ್ಟಾಂಪ್ ವಹಿ ನಿರ್ವಹಣೆ, ಜಿ.ಪಂ. & ತಾ.ಪಂ. ಗೆ ಸಂಬಂಧಿಸಿದ ತಾಲೂಕು ಮಟ್ಟದ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಂಡಿಸುವುದು, ಸದರಿ ಯೋಜನೆಗಳ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುವುದು. ಮೇಲಾಧಿಕಾರಿಗಳ ಆದೇಶ ಪಾಲಿಸುವುದು.

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು., ಜಿ.ಪಂ. ಹಳಿಯಾಳ ರವರ ಕರ್ತವ್ಯ ಮತ್ತು ಜವಾಬ್ದಾರಿಗಳು:**

- ಇಲಾಖೆಯ ತಾಲೂಕು ಮಟ್ಟದ ಪತ್ರಾಂಕಿತ ಅಧಿಕಾರಿಯ ಕರ್ತವ್ಯ ನಿರ್ವಹಣೆ.
- ತೋಟಗಾರಿಕೆ ಇಲಾಖೆಯ ಸಮಸ್ತ ಯೋಜನೆಗಳ ಅಭಿವೃದ್ಧಿ ವಿಸ್ತರಣೆ ಇತ್ಯಾದಿ ಕೆಲಸಗಳ ನಿರ್ವಹಣೆ.
- ಇಲಾಖೆಯ ಮಾರ್ಗಸೂಚಿ, ಅನುಮೋದಿತ ಎಂಪಿಕ್ ಕಾರ್ಯಕ್ರಮಗಳ ಪ್ರಕಾರ ಫಲಾನುಭವಿಗಳ ಆಯ್ಕೆ ಹಾಗೂ ಯೋಜನೆಗಳ ಪ್ರಗತಿ ನಿರ್ವಹಣೆ.
- ತೋಟಗಾರಿಕೆ ಚಟುವಟಿಕೆಗಳನ್ನು ಕಾಲಕ್ಕನುಸಾರ ಕೈಗೊಳ್ಳಲು ರೈತರಿಗೆ ಮಾರ್ಗದರ್ಶನ ನೀಡುವುದು, ಕಚೇರಿ ಸಿಬ್ಬಂದಿಗಳ ಪ್ರಗತಿ ಪರಿಶೀಲನೆ, ರೈತರು/ ಜನಪ್ರತಿನಿದಿಗಳೊಂದಿಗೆ ಕಲೆತು ರೈತರ ಸಮಸ್ಯೆಗಳಿಗೆ ಸ್ಪಂದಿಸುವುದರೊಂದಿಗೆ ಮಾರ್ಗೋಪಾಯ ಸೂಚಿಸುವುದು.
- ತಾಲೂಕು ಮಟ್ಟದ ಎಲ್ಲಾ ಅಧಿಕೃತ ಸಭೆ ಸಮಾರಂಭಗಳಿಗೆ ಹಾಜರಾಗುವುದು.
- ಕಚೇರಿಯಲ್ಲಿ ಪರಿಕರಗಳ ಖರೀದಿ, ಹಣಕಾಸು ವ್ಯವಸ್ಥೆ, ಪತ್ರ ವ್ಯವಹಾರ ಇತ್ಯಾದಿಗಳ ಪರಮೋಚ್ಚ ಅಧಿಕಾರ ಹೊಂದಿರುತ್ತಾರೆ.
- ಮೇಲಧಿಕಾರಿಗಳು ನೀಡುವ ಆದೇಶ ಮತ್ತು ಸೂಚನೆಗಳನ್ನು ಪರಿಪಾಲಿಸುವುದು.

## ಅಧಿಕಾರಿ/ ನೌಕರರ ಅಧಿಕಾರ ಮತ್ತು ಕರ್ತವ್ಯಗಳು:

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು:**

ತಾಲೂಕ ಮಟ್ಟದ ಇಲಾಖೆಯ ಕಾರ್ಯನಿರ್ವಹಣಾ ಅಧಿಕಾರಿಯಾಗಿರುತ್ತಾರೆ. ತೋಟಗಾರಿಕೆಯ ಸಮಸ್ತ ಯೋಜನೆಗಳ ತೋಟಗಾರಿಕೆ ಚಟುವಟಿಕೆ ಅಭಿವೃದ್ಧಿ ಹಾಗೂ ವಿಸ್ತರಣೆಯ ಜವಾಬ್ದಾರಿ ಹೊಂದಿರುತ್ತಾರೆ. ಇಲಾಖೆಯ ಮಾರ್ಗಸೂಚಿ ಹಾಗೂ ಅನುಮೋದಿತ ಎಮ್ ಪಿಕ್ ಪ್ರಕಾರ ತಾಲೂಕಿನಲ್ಲಿ ವಿವಿಧ ಯೋಜನೆಗಳ ಕೆಲಸ ಕೈಗೊಳ್ಳುವುದು, ತೋಟಗಾರಿಕೆ ಚಟುವಟಿಕೆಗಳನ್ನು ಕಾಲಕ್ಕೆ ಅನುಸಾರವಾಗಿ ಕೈಗೊಳ್ಳಲು ರೈತರಿಗೆ ಮಾಹಿತಿ ನೀಡುವುದು, ಕಚೇರಿಯ ಅಧೀನ ಸಿಬ್ಬಂದಿ ಕಚೇರಿಯಲ್ಲಿ / ಸಾರ್ವಜನಿಕರೊಂದಿಗೆ ಗೌರವಯುತವಾಗಿ ಸಮಯೋಚಿತ ಕೆಲಸ ನಿರ್ವಹಿಸುತ್ತಾರೆಯೇ ಎನ್ನುವ ಬಗ್ಗೆ ನಿಗಾ ವಹಿಸುತ್ತಾರೆ. ತಾಲೂಕಾ ವ್ಯಾಪ್ತಿಗೆ ಒಳಪಡುವ ತೋಟಗಾರಿಕೆ ಚಟುವಟಿಕೆ ಅಭಿವೃದ್ಧಿ, ವಿಸ್ತರಣೆ, ಸಸ್ಯ ಸಂರಕ್ಷಣೆ ಇತ್ಯಾದಿ ಕುರಿತು ರೈತರ ತೋಟಕ್ಕೆ ಭೇಟಿ ನೀಡುವುದು, ಫಲಾನುಭವಿಗಳನ್ನು ಆಯ್ಕೆ ಮಾಡುವುದು, ಜನಪ್ರತಿನಿಧಿಗಳೊಂದಿಗೆ ಉತ್ತಮ ಸಂಬಂಧ ಹೊಂದುವುದರೊಂದಿಗೆ ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಮಾರ್ಗೋಪಾಯ ಸೂಚಿಸುವ ಹೊಣೆ ಹೊಂದಿರುತ್ತಾರೆ. ತಾಲೂಕು ಮಟ್ಟದ ಎಲ್ಲ ಸಭೆಗಳಿಗೆ ಖುದ್ದಾಗಿ ಹಾಜರಾಗುವುದು, ಅದೀನ ಸಿಬ್ಬಂದಿಗಳಿಗೆ ವಹಿಸಿರುವ ಕೆಲಸಗಳ ಪ್ರಗತಿ ಪರಿಶೀಲನೆ, ಪರಿಕರಗಳ ಖರೀದಿ, ದಾಸ್ತಾನು ವಿತರಣೆ ಹಾಗೂ ಎಲ್ಲ ಬಗೆಯ ಲೆಕ್ಕ ತಪಾಸಣೆ ವರದಿಗಳಿಗೆ ಅನುಸರಣ ವರದಿ ಸಲ್ಲಿಸುವುದು, ಹಣಕಾಸು ವ್ಯವಸ್ಥೆ, ಇತ್ಯಾದಿಗಳ ಸಮಸ್ತ ಜವಾಬ್ದಾರಿ ಹೊಂದಿರುತ್ತಾರೆ. ಪರೋಪಜೀವಿ ಪ್ರಯೋಗಶಾಲೆಯಲ್ಲಿ ಪರೋಪಜೀವಿಗಳನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿ ಹೊಂದಿರುತ್ತಾರೆ. ಹಾಗೂ ಮೇಲಧಿಕಾರಿಗಳ ಆದೇಶ ಪಾಲಿಸುವುದು.

## ನಿರ್ಣಯ ತೆಗೆದುಕೊಳ್ಳುವಂತಹ ಪ್ರಸ್ಥಾವನೆಗಳಲ್ಲಿ ಪಾಲಿಸಬೇಕಾದ ಕ್ರಮ, ಮೇಲ್ವಿಚಾರಣೆ ಚಾನಲ್ ಗಳ ಮತ್ತು ಅಕೌಂಟಬಲಿಟಿ ಸೇರಿದಂತೆ :

**ತೋಟಗಾರಿಕೆ ಸಹಾಯಕರು :**
ಸಹಾಯಕ ತೋಟಗಾರಿಕೆ ಅಧಿಕಾರಿರವರ ಎಲ್ಲ ಕೆಲಸಗಳಲ್ಲಿ ಸಹಕಾರ ನೀಡುವುದು, ಎಲ್ಲ ಯೋಜನೆಗಳ ಪರಿಕರಗಳನ್ನು ಫಲಾನುಭವಿಗಳಿಗೆ ನೀಡಿರುವ ಬಗ್ಗೆ ದಾಖಲೆಗಳನ್ನು ಸಿದ್ಧಪಡಿಸುವುದು, ಮೇಲಾಧಿಕಾರಿಗಳ ಆದೇಶ ಪಾಲಿಸುವುದು.

**ಪ್ರಥಮ ದರ್ಜೆ ಸಹಾಯಕ:**
ತಾವು ಸ್ವೀಕರಿಸಿರುವ ಪತ್ರಗಳ ಸಂಬಂಧ ನಿಯಮಗಳು, ಸರ್ಕಾರಿ ಆದೇಶಗಳು , ಸುತ್ತೋಲೆಗಳು ಇತ್ಯಾದಿ ಸೂಚನೆಗಳನ್ನು ಗಮನಿಸಿ, ಮುಂದಿನ ಆದೇಶಕ್ಕಾಗಿ ಕಡತ ಬಿಲ್ಲುಗಳನ್ನು, ಆದೇಶಗಳನ್ನು ನಗದು ವಹಿ ಇತ್ಯಾದಿಗಳನ್ನು ವಿಳಂಬ ಮಾಡದೇ ಮಂಡಿಸುವುದು.

**ಸಹಾಯಕ ತೋಟಗಾರಿಕೆ ಅಧಿಕಾರಿ:**
ಹಳಿಯಾಳ ತಾಲೂಕಿಗೆ ಸಂಬಂಧಿಸಿದ ಎಲ್ಲ ಯೋಜನೆಗಳ ಕಡತ ನಿರ್ವಹಣೆ, ಎಂಪಿಕ್, ಮಾರ್ಗಸೂಚಿಗಳ ಪ್ರಕಾರ ಯೋಜನೆಗಳನ್ನು ಅನುಷ್ಠಾನಗೊಳಿಸುವುದು. ಪ್ರಗತಿ ವರದಿ ತಯಾರಿಕೆ, ಫಲಾನುಭವಿಗಳ ತಾಕು ಪರಿಶೀಲನೆ ಹಾಗೂ ತಾಂತ್ರಿಕ ಸಲಹೆ ಖರೀದಿಸಿರುವ ಎಲ್ಲ ಪರಿಕರಗಳ ದಾಸ್ತಾನು ಹಾಗೂ ಅವುಗಳ ನಿರ್ವಹಣೆ ಹಾಗೂ ಮೇಲಧಿಕಾರಿಗಳ ಆದೇಶ ಪಾಲಿಸುವುದು.

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು:**
ಪ್ರಸ್ಥಾವನೆಗಳ ಕುರಿತು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ತೀರ್ಮಾನಿಸುವುದು, ತಮ್ಮ ಹುದ್ದೆಗೆ ನೀಡಿರುವ ಅಧಿಕಾರ ವ್ಯಾಪ್ತಿಯೊಳಗೆ ಅನುಮೋದಿಸಿ ಮಂಜೂರಾತಿ ನೀಡುವುದು, ಅಗತ್ಯ ಸಂದರ್ಭದಲ್ಲಿ ತೋಟಗಾರಿಕೆ ಉಪನಿರ್ದೇಶಕರಿಗೆ ಶಿಫಾರಸು ಮಾಡುವುದು ಹಾಗೂ ಮೇಲಧಿಕಾರಿಗಳ ಆದೇಶ ಪಾಲಿಸುವುದು.

## ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗದಿಪಡಿಸಲಾದ ವಿಧಾನಗಳು, ಕಟ್ಟುಪಾಡುಗಳು

**ತೋಟಗಾರರು:**
ಮೇಲಾಧಿಕಾರಿಗಳು ವಹಿಸಿದ ಕೆಲಸಗಳನ್ನು ಅದೇ ದಿನ ನಿರ್ವಹಿಸುವುದು.

**ತೋಟಗಾರಿಕೆ ಸಹಾಯಕರು:**
ಸಹಾಯಕ ತೋಟಗಾರಿಕೆ ಅಧಿಕಾರಿಗಳ ಎಲ್ಲಾ ಕೆಲಸಗಳಲ್ಲಿ ಸಹಕರಿಸಿ ನಿಗಧಿಪಡಿಸಿರುವ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವುದು.

**ಸಹಾಯಕ ತೋಟಗಾರಿಕೆ ಅಧಿಕಾರಿ:**
ತಾಲೂಕಿಗೆ ಸಂಬಂಧಿಸಿದ ಎಲ್ಲಾ ಯೋಜನೆಗಳನ್ನು ಎಂ.ಎಂ.ಆರ್ ಹಾಗೂ ಇಲಾಖೆ ಮಾರ್ಗಸೂಚಿ ಪ್ರಕಾರ ನಿಗದಿತ ಅವಧಿಯೊಳಗೆ ಅನುಷ್ಠಾನಗೊಳಿಸುವುದು ಹಾಗೂ ಮೇಲಧಿಕಾರಿಗಳ ಆದೇಶ ಪಾಲಿಸುವುದು.

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು :**
ಮಂಡಿಸಲಾದ ಎಲ್ಲಾ ಕಡತ, ಬಿಲ್ಲು, ವಹಿಗಳ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳುವುದು, ತಮ್ಮ ಅಧಿಕಾರ ವ್ಯಾಪ್ತಿ ಮೀರಿದ ಸಂದರ್ಭಗಳಲ್ಲಿ ತೋಟಗಾರಿಕೆ ಉಪನಿರ್ದೇಶಕರವರಿಗೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು.

**ನೌಕರರು ಅವರವರ ಕರ್ತವ್ಯಗಳನ್ನು ನಿರ್ವಹಿಸಲಾದ/ಉಪಯೋಗಿಸುವ/ ನಿಯಂತ್ರಣದಲ್ಲಿ ಟ್ಟುಕೊಂಡಿರುವ ನಿಯಮಗಳು/ ಸೂಚನೆಗಳು/ಕೈಪಿಡಿಗಳು/ ದಾಖಲೆಗಳು ಮತ್ತು ನಿಬಂದನೆಗಳು.**

1. ಕರ್ನಾಟಕ ನಾಗರೀಕ ಸೇವಾ ನಿಯಮಗಳು.
2. ಕರ್ನಾಟಕ ಆರ್ಥಿಕ ಸಂಹಿತೆ
3, ಕಛೇರಿ ಕೈ ಪಿಡಿ.
4. ವೃಂದ ಮತ್ತು ನೇಮಕಾತಿ ನಿಯಮಗಳು
5. ಆಯವ್ಯಯ ಕೈ ಪಿಡಿ
6. ಕರ್ನಾಟಕ ಖಜಾನೆ ಸಂಹಿತೆ
7. ಸಾದಿಲ್ವಾರು ವೆಚ್ಚದ ಕೈ ಪಿಡಿ
8. ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ
9. ಇಲಾಖೆ ಮತ್ತು ಆರ್ಥಿಕ ಇಲಾಖೆ ಹೊರಡಿಸಿದ ಡೆಲಿಗೇಷನ್ ಆಫ್ ಪಾವರ್ಸ
10, ಸರಕಾರದ ಆಧಿಸೂಚನೆಗಳು (ಸುತ್ತೋಲೆಗಳು) ಇತ್ಯಾದಿ

**ಕಡತ ಶೀರ್ಷಿಕೆ**

| ಅ.ಸಂ. | ಕಡತದ ಶಾಖೆ | | ದಾಖಲಾತಿಗಳ ಉಲ್ಲೇಖ |
|---|---|---|---|
| 1. | ಸಿಬ್ಬಂದಿ | ಇಎಸ ಟಿ | ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳ ಶಿಸ್ತು, ನಡತೆ, ಲೆಕ್ಕಪತ್ರ ಮತ್ತು ಇತರ ವಿಷಯಗಳು |
| 2. | ಲೆಕ್ಕ ತಪಾಸಣೆ | ಆಡಿಟ್ | ಲೆಕ್ಕ ತಪಾಸಣೆಗೆ ಸಂಬಂಧಿಸಿದ ಕಡತಗಳು |
| 3. | ತಾಂತ್ರಿಕ ವಿಷಯಗಳು | ಸತೋಅ ಕೇಂದ್ರಸ್ಥಾನ | ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಪತ್ರಗಳು, ಪರಿಕರಗಳು, ಬಿಲ್ಲುಗಳು ಇತ್ಯಾದಿ ನಿರ್ವಹಣೆ |

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿ.ಪಂ) ಹಳಿಯಾಳ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ದೂರವಾಣಿ ವಿವರ:**

| ಕ್ರ.ಸಂ. | ಹುದ್ದೆ | ಹೆಸರು | ದೂರವಾಣಿ ಸಂಖ್ಯೆ |
|---|---|---|---|
| 1 | ತೋಟಗಾರರು | ಶ್ರೀ ಶಂಕರ ನಾಗಪ್ಪ ವಡ್ಡರ | 08284–220305 |
| 2 | ತೋಟಗಾರರು | ಶ್ರೀ ಈಶ್ವರ ಗುಂಡು ಕಾರೇಕಾರ | 08284–220305 |
| 3 | ತೋಟಗಾರಿಕೆ ಸಹಾಯಕರು | ಶ್ರೀ ವಿನುತಾ ಆನಂದ ನಾಯ್ಕ | 08284–220305 |
| 4 | ತೋಟಗಾರಿಕೆ ಸಹಾಯಕರು | --ಖಾಲಿ ಇದೆ--- | – |
| 6 | ಸಹಾಯಕ ತೋಟಗಾರಿಕೆ ಅಧಿಕಾರಿ (ತಾಂತ್ರಿಕ ಸಹಾಯಕರು) | ಕು. ಪ್ರೀಯಂಕಾ ತು. ಕುರಬೇಟ | 08284–220305 |
| 7 | ಸಹಾಯಕ ತೋಟಗಾರಿಕೆ ಅಧಿಕಾರಿ ರೈಸಂಕೇ. ಮುರ್ಕವಾಡ | ಶ್ರೀ ಎಮ್.ಎಮ್.ಮುಲ್ಲಾ | 08284–220305 |
| 8 | ಸಹಾಯಕ ತೋಟಗಾರಿಕೆ ಅಧಿಕಾರ ರೈಸಂಕೇ. ಹಳಿಯಾಳ | ಕು. ಅಕ್ಷತಾ ಗಂ. ಹೊಂಗಲ | 08284–220305 |
| 9 | ಸಹಾಯಕ ತೋಟಗಾರಿಕೆ ಅಧಿಕಾರಿ ರೈಸಂಕೇ. ದಾಂಡೇಲಿ | ಶ್ರೀ ವಿನೋದ ಅ. ಬಕುಳಿ | 08284–220305 |
| 10 | ಸಹಾಯಕ ತೋಟಗಾರಿಕೆ ಅಧಿಕಾರಿ ರೈಸಂಕೇ. ಸಾಂಬ್ರಾಣಿ | ಶ್ರೀ ಬಸವರಾಜ ಎಚ್. ಮಾದರ | 08284–220305 |
| 11 | ಪ್ರಥಮ ದರ್ಜೆ ಸಹಾಯಕರು | --ಖಾಲಿ ಇದೆ-- | – |
| 12 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಎ. ಆರ್. ಹೇರಿಯಾಲ್ | 08284–220305 |

**ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದ ವಿವರ**

| ಅ.ಸಂ. | ಹುದ್ದೆ | ಹೆಸರು |
|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಎ. ಆರ್. ಹೇರಿಯಾಲ್ |
| 2 | ಸಹಾಯಕ ತೋಟಗಾರಿಕೆ ಅಧಿಕಾರಿ (ತಾಂತ್ರಿಕ ಸಹಾಯಕರು) | ಕು. ಪ್ರೀಯಂಕಾ ತು. ಕುರಬೇಟ |
| 3 | ಸಹಾಯಕ ತೋಟಗಾರಿಕೆ ಅಧಿಕಾರಿ ರೈಸಂಕೇ. ಮುರ್ಕವಾಡ | ಶ್ರೀ ಎಮ್.ಎಮ್.ಮುಲ್ಲಾ |
| 4 | ಸಹಾಯಕ ತೋಟಗಾರಿಕೆ ಅಧಿಕಾರಿ ರೈಸಂಕೇ. ದಾಂಡೇಲಿ | ಶ್ರೀ ವಿನೋದ ಅ. ಬಕುಳಿ |
| 5 | ಸಹಾಯಕ ತೋಟಗಾರಿಕೆ ಅಧಿಕಾರಿ ರೈಸಂಕೇ. ಹಳಿಯಾಳ | ಕು. ಅಕ್ಷತಾ ಗಂ. ಹೊಂಗಲ |
| 6 | ಸಹಾಯಕ ತೋಟಗಾರಿಕೆ ಅಧಿಕಾರಿ ರೈಸಂಕೇ. ಸಾಂಬ್ರಾಣಿ | ಶ್ರೀ ಬಸವರಾಜ ಎಚ್. ಮಾದರ |
| 7 | ಪ್ರಥಮ ದರ್ಜೆ ಸಹಾಯಕ | --ಖಾಲಿ ಇದೆ-- |
| 8 | ತೋಟಗಾರಿಕೆ ಸಹಾಯಕರು | ಶ್ರೀ ವಿನುತಾ ಆನಂದ ನಾಯ್ಕ |
| 10 | ತೋಟಗಾರಿಕೆ ಸಹಾಯಕರು | --ಖಾಲಿ ಇದೆ-- |
| 11 | ತೋಟಗಾರರು | ಶ್ರೀ ಈಶ್ವರ ಗುಂಡು ಕಾರೇಕಾರ |
| 12 | ತೋಟಗಾರರು | ಶ್ರೀ ಶಂಕರ ನಾಗಪ್ಪ ವಡ್ಡರ |

**ಅಧಿಕಾರಿ / ಸಿಬ್ಬಂದಿಗಳ ಮಾಸಿಕ ವೇತನದ ವಿವರಗಳು.**

| ಅ.ಸಂ. | ಹುದ್ದೆ | ಹೆಸರು | ವೇತನ ಶ್ರೇಣಿ | ಮೂಲವೇತನ |
|---|---|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಎ. ಆರ್. ಹೇರಿಯಾಲ್ | 28100–50100 | 28800 |
| 2 | ಸಹಾಯಕ ತೋಟಗಾರಿಕೆ ಅಧಿಕಾರಿ (ತಾಂತ್ರಿಕ ಸಹಾಯಕರು) | ಕು. ಪ್ರೀಯಂಕಾ ತು. ಕುರಬೇಟ | 21600–40050 | 21600 |
| 3 | ಸಹಾಯಕ ತೋಟಗಾರಿಕೆ ಅಧಿಕಾರಿ ರೈಸಂಕೇ. ಮುರ್ಕವಾಡ | ಶ್ರೀ ಎಮ್.ಎಮ್.ಮುಲ್ಲಾ | 21600–40050 | 24000 |
| 4 | ಸಹಾಯಕ ತೋಟಗಾರಿಕೆ ಅಧಿಕಾರಿ ರೈಸಂಕೇ. ದಾಂಡೇಲಿ | ಶ್ರೀ ವಿನೋದ ಅ. ಬಕುಳಿ | 21600–40050 | 22800 |
| 5 | ಸಹಾಯಕ ತೋಟಗಾರಿಕೆ ಅಧಿಕಾರಿ ರೈಸಂಕೇ. ಹಳಿಯಾಳ | ಕು. ಅಕ್ಷತಾ ಗಂ. ಹೊಂಗಲ | 21600–40050 | 21600 |
| 6 | ಸಹಾಯಕ ತೋಟಗಾರಿಕೆ ಅಧಿಕಾರಿ ರೈಸಂಕೇ. ಸಾಂಬ್ರಾಣಿ | ಶ್ರೀ ಬಸವರಾಜ ಎಚ್. ಮಾದರ | 21600–40050 | 22800 |
| 7 | ಪ್ರಥಮ ದರ್ಜೆ ಸಹಾಯಕ | --ಖಾಲಿ ಇದೆ-- | 14550–26700 | – |
| 9 | ತೋಟಗಾರಿಕೆ ಸಹಾಯಕರು | ಶ್ರೀ ವಿನುತಾ ಆನಂದ ನಾಯ್ಕ | 12500–24000 | 12500 |
| 10 | ತೋಟಗಾರಿಕೆ ಸಹಾಯಕರು | --ಖಾಲಿ ಇದೆ-- | 12500–24000 | – |
| 11 | ತೋಟಗಾರರು | ಶ್ರೀ ಈಶ್ವರ ಗುಂಡು ಕಾರೇಕಾರ | 11000–19000 | 15600 |
| 12 | ತೋಟಗಾರರು | ಶ್ರೀ ಶಂಕರ ನಾಗಪ್ಪ ವಡ್ಡರ | 11000–19000 | 15600 |

# 2016-17 NHM PROGRESS REPORT OF HALIYAL TALUK

| Sl.No. | Programme | Target | | Released budget | Achievement | | % of progress |
|---|---|---|---|---|---|---|---|
| | | Phy | Fin | | Phy | Fin | |
| **I** | **All AEP Programmes** | | | | | | |
| 1 | Banana TC | 2 | 0.61196 | 0.61196 | 2 | 0.61196 | 100 |
| 2 | Vegetable Hybrids | 12 | 2.4000 | 2.4000 | 12 | 2.4000 | 100 |
| 3 | Cashew AEP | **10.53** | 1.2640 | 1.2640 | 10 | 1.2640 | 100 |
| **II** | **All maintainance** | | 0.0000 | | | | |
| 4 | Banana Suckers 1 Maintanace | 1 | 0.0650 | 0.0650 | 1 | 0.0650 | 100 |
| 5 | Banana TC Maintanace | 2.2 | 0.2244 | 0.2244 | 2.2 | 0.2244 | 100 |
| 6 | Cashew 1 Year | **10** | 0.3760 | 0.3760 | 10 | 0.3760 | 100 |
| 7 | Cashew II Year | 5 | 0.2000 | 0.2000 | 5 | 0.2000 | 100 |
| **III** | **Others** | | 0.0000 | | | | |
| 8 | Small Nursery | 1 | 5.6350 | 5.6350 | 1 | 5.635 | 100 |
| 9 | Water Harvesting | 5 | 3.7330 | 3.7330 | 5 | 3.7330 | 100 |
| 12 | Vermi Compost/ Biodigester | 3 | 0.9000 | 0.9000 | 3 | 0.9000 | 100 |
| 13 | Power machines up to 20 HP for Others | 1 | 0.7500 | 0.7500 | 1 | 0.7500 | 100 |
| 14 | Power machines up to 20 HP for SC/ST/SF/WF | 3 | 3.0000 | 2.5000 | 3 | 2.5000 | 100 |
| 15 | Mission Management | | 0.65282 | 0.42000 | 0 | 0.4200 | 100 |
| | **Total** | **55.73** | **19.81218** | **19.07936** | **55.2** | **19.07936** | **100** |

| 2016–17 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ತಾಲೂಕ: ಹಳಿಯಾಳ | | | | | | | | | | | |
|---|---|---|---|---|---|---|---|---|---|---|---|
| ಕ್ರ.ಸಂ. | ವಿವರ | ಗುರಿ | | | ಬಿಡುಗಡೆ | | | ಸಾಧನೆ | | | % ಸಾಧನೆ |
| | | 59 | 422 | 423 | 59 | 422 | 423 | 59 | 422 | 423 | |
| 1 | ಪ್ರದೇಶ ವಿಸ್ತರಣೆ | 16.09596 | 0 | 0 | 16.09596 | 0 | 0 | 16.09596 | 0 | 0 | 100 |
| 2 | ಕೈತೋಟ ಮತ್ತು ತಾರಸಿ ತೋಟ | 25.6750 | 0 | 0 | 25.6750 | 0 | 0 | 25.6750 | 0 | 0 | 100.00 |
| | ದಾಂಡೇಲಿ ಪಟ್ಟಣ | 20.0000 | 0 | 0 | 20.0000 | 0 | 0 | 20.0000 | 0 | 0 | 100.00 |
| | ಹಳಿಯಾಳ ಪಟ್ಟಣ | 5.6750 | 0 | 0 | 5.6750 | 0 | 0 | 5.6750 | 0 | 0 | 100.00 |
| 3 | ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ | 0.0 | 0.2350 | 0.0 | 0.0 | 0.2350 | 0.0 | 0.0 | 0.2350 | 0.0 | 100 |
| 4 | ಹೊಂದಾಣಿಕೆ ವೆಚ್ಚ NHM | 0.0 | 1.95165 | 0.6200 | 0.0 | 1.95165 | 0.6200 | 0.0 | 1.9515 | 0.6200 | 99.99 |
| 5 | ಹೊಂದಾಣಿಕೆ ವೆಚ್ಚ ಯಾಂತ್ರೀಕರಣ | 0 | 1.51736 | 0.800 | 0 | 1.51736 | 0.800 | 0 | 1.51736 | 0.800 | 100 |

| 2016–17 ನೇ ಸಾಲಿನ ರಾಜ್ಯವಲಯ ಹಾಗೂ ಜಿಲ್ಲಾ ಪಂಚಾಯತ ಯೋಜನೆ ತಾಲೂಕ: ಹಳಿಯಾಳ | | | | | |
|---|---|---|---|---|---|
| Sl.No. | ವಿವರ | ಗುರಿ | ಬಿಡುಗಡೆ | ಸಾಧನೆ | ಶೇಕಡಾ ಸಾಧನೆ |
| | | Fin | | Fin | |
| 1 | Drip Irrigation | 32.0000 | 32.0000 | 31.9852 | 99.95 |
| 2. | RKVY MECHANIZATION | 5.8967 | 5.8967 | 5.8967 | 100.00 |
| 3. | ಹನಿ ನೀರಾವರಿ (D–02) | 2.00 | 2.00 | 2.00 | 100 |
| 4. | ಕ್ಷೇತ್ರ ನಿರ್ವಹಣೆ (D–04) | 0.2 | 0.2 | 0.19847 | 99.235 |
| 5. | ಜೇನು ಕೃಷಿ ಅಭಿವೃದ್ಧಿ (D–08) | 0.51 | 0.51 | 0.503 | 97 |
| 6. | ಪ್ರಚಾರ ಮತ್ತು ಸಾಹಿತ್ಯ (D–06) | 0.0500 | 0.0500 | 0.0499 | 99.8 |
| | **Total** | | | | |

**ಇಲಾಖೆಯಿಂದ ಅಥೋರೈಸೇಶನ್ ಮಂಜೂರಾದ ಅಥವಾ ಪರವಾನಿಗೆ ನೀಡಲಾದ ಮತ್ತು ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ರೆಸಿಪಿಯೆಂಟ್‌ಗಳ ವಿವರಗಳು**

ಹಳಿಯಾಳ ತಾಲೂಕಿಗೆ ಮಂಜೂರಾದ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಉಚಿತವಾಗಿ/ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ಫಲಾನುಭವಿಗಳ ವಿವರಗಳನ್ನು ಯೋಜನೆವಾರು ಪ್ರತ್ಯೇಕ ವಹಿಗಳಲ್ಲಿ ನಿರ್ವಹಿಸಲಾಗಿದೆ. ಆಯಾ ವರ್ಷದ ಅಂತ್ಯಕ್ಕೆ ಸದರಿ ಫಲಾನುಭವಿಗಳ ಪಟ್ಟಿಯ ಪ್ರತಿಗಳನ್ನು ಮೇಲಧಿಕಾರಿಗಳಿಗೆ ಹಾಗೂ ಕಛೇರಿ ನೋಟೀಸ ಬೋರ್ಡಿನಲ್ಲಿ ಪ್ರಕಟಿಸಲಾಗಿದೆ.

**ಕುಗ್ಗಿಸಲಾದ ಎಲೆಕ್ಟ್ರಾನಿಕ್ ಮಾದರಿಯಲ್ಲಿನ ಲಭ್ಯವಿರುವ ಮಾಹಿತಿ ವಿವರ ದೊರಕುವಂತೆ ಅಥವಾ ಮಾಹಿತಿ ಇಟ್ಟುಕೊಂಡಿರುವಿಕೆ.**

ಕಚೇರಿಯಲ್ಲಿ ಕಂಪ್ಯೂಟರಿನಲ್ಲಿ ಯೋಜನೆಗಳು, ಫಲಾನುಭವಿಗಳ ವಿವರಗಳನ್ನು ದಾಖಲು ಮಾಡಲಾಗಿದೆ.

**ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಅವಕಾಶ ವಿಚಾರಗಳು ಗ್ರಂಥಾಲಯ ಅಥವಾ ಓದುವ ಕೊಠಡಿಗಳನ್ನು ಒಳಗೊಂಡು ಸಾರ್ವಜನಿಕ ಉಪಯೋಗಕ್ಕಾಗಿ ತೆರೆದಿದ್ದರೆ:**

ಸಧ್ಯಕ್ಕೆ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ಇರುವುದಿಲ್ಲ.

**ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ ಮತ್ತು ಇತರೆ ವಿಷಯಗಳು.**

ಶ್ರೀ ಎಮ್.ಎಮ್.ಮುಲ್ಲಾ
ಪ್ರಭಾರ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
(ಜಿ.ಪಂ) ಹಳಿಯಾಳ
ದೂರವಾಣೀ ಸಂಖ್ಯೆ: 08284–220305

**ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ**

ಕು. ಪ್ರೀಯಂಕಾ ತು. ಕುರಬೇಟ
ಸಹಾಯಕ ತೋಟಗಾರಿಕೆ ಅಧಿಕಾರಿ
(ಜಿ.ಪಂ) ಹಳಿಯಾಳ

**ಮೇಲ್ಮನವಿ ಪ್ರಾಧಿಕಾರ:**

ಶ್ರೀ ಶಶಿಕಾಂತ ಕೋಟಿಮನಿ
ತೋಟಗಾರಿಕೆ ಉಪನಿರ್ದೇಶಕರು,
ಜಿಲ್ಲಾ ಪಂಚಾಯತ್, ಶಿರಸಿ, ಉತ್ತರಕನ್ನಡ.
ದೂರವಾಣಿ ಸಂಖ್ಯೆ: 08384 226427

********** @ ********** @ ********** @ ********** @ ********

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
(ಜಿ.ಪಂ) ಹಳಿಯಾಳ